# ಕರ್ನಾಟಕ ವಿಧಾನಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1043**
**ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸಬೇಕಾದ ದಿನಾಂಕ : 18.12.2024.**
**ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2019 ನೇ ಸಾಲಿನಿಂದ 2023 ನೇ ಸಾಲಿನವರೆಗೆ ಅತಿವೃಷ್ಠಿಯಿಂದ ಸಂಪೂರ್ಣ ಮನೆ ಕಳೆದುಕೊಂಡ ಮತ್ತು ಭಾಗಶಃ ಮನೆ ಹಾನಿಗೊಳಗಾದ ಸಾವಿರಾರು ಜನರಿಗೆ ಇನ್ನೂ ಪರಿಹಾರ ದೊರಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2019 ನೇ ಸಾಲಿನಿಂದ 2023 ಸಾಲಿನವರೆಗೆ ಅತೀವೃಷ್ಟಿಯಿಂದಾಗಿ ಸಂಪೂರ್ಣ ಮನೆ ಕಳೆದುಕೊಂಡ ಮತ್ತು ಭಾಗಶಃ ಮನೆ ಹಾನಿಗೊಳಗಾದ ಅರ್ಹ ಸಂತ್ರಸ್ತರಿಗೆ ಕೇಂದ್ರ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿದ NDRF/SDRF ಮಾರ್ಗಸೂಚಿಯನ್ವಯ ಹಾಗೂ ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿದ ಮಾನದಂಡಗಳನ್ವಯ ಅರ್ಹ ಸಂತ್ರಸ್ತರಿಗೆ ಮೊದಲನೆ ಕಂತಿನಲ್ಲಿ ನಿಗಧಿಪಡಿಸಿದ ಮೊತ್ತವನ್ನು ಪಾವತಿಸಲಾಗಿದ್ದು, ಅರ್ಹತೆಯಂತೆ ಸಂಪೂರ್ಣ ಹಾಗೂ ಭಾಗಶಃ ಮನೆ ಹಾನಿ (ಪುನರ್ ನಿರ್ಮಾಣ/ ದುರಸ್ತಿ) ಪ್ರಕರಣಗಳಲ್ಲಿ ಮನೆ ಪುನರ್ ನಿರ್ಮಾಣ/ದುರಸ್ಥಿಗಾಗಿ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಅರ್ಹ ಸಂತ್ರಸ್ತರಿಗೆ ಕಟ್ಟಡ ನಿರ್ಮಾಣದ/ದುರಸ್ಥಿಯ ವಿವಿಧ ಹಂತಗಳಿಗನುಸಾರವಾಗಿ ನಿಗಧಿತ ಮೊತ್ತದ ಪರಿಹಾರ ವಿತರಿಸಲಾಗುತ್ತಿದೆ. ಈ ಇಲಾಖೆಯ ಹಂತದಲ್ಲಿ ಸಾವಿರಾರು ಜನರಿಗೆ ಇನ್ನೂ ಪರಿಹಾರ ದೊರಕದಿರುವಂತಹ ಪ್ರಕರಣಗಳು ಇರುವುದಿಲ್ಲ. |
| ಆ) | ಬಂದಿದ್ದಲ್ಲಿ, ಸಮೀಕ್ಷೆಯ ಪ್ರಕಾರ ಈ ಸಾಲುಗಳಲ್ಲಿ ಸಂಪೂರ್ಣ ಮನೆ ಹಾನಿಗೊಳಗಾದವರು ಎಷ್ಟು; ಇವರಿಗೆ ಪರಿಹಾರ ನೀಡಲು ಅಗತ್ಯವಿರುವ ಅನುದಾನವೆಷ್ಟು; ಪರಿಹಾರ ರೂಪದಲಿ ಬಿಡುಗಡೆಯಾದ ಅನುದಾನ ಎಷ್ಟು; ಬಿಡುಗಡೆ ಬಾಕಿ ಇರುವ ಅನುದಾನ ಎಷ್ಟು; ಪರಿಹಾರ ಪಡೆದ ಮತ್ತು ಪಡೆಯದ ಫಲಾನುಭವಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು) | ಪ್ರಶ್ನೆ ಉದ್ಭವಿಸುವುದಿಲ್ಲ. |

RD/599/TNR/2024-DM-RD

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು